**ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ**

[ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ]

ಕಂಪನಿ ಕಾರ್ಯಾಲಯ

ನವನಗರ, ಹಳೇ ಪು.ಬೆಂ. ರಸ್ತೆ, ಹುಬ್ಬಳ್ಳಿ - 580 025

**HUBLI ELECTRICITY SUPPLY COMPANY LIMITED**

[Wholly owned Govt. of Karnataka undertaking]

Company Office,
Navanagar, Old P.B.Road, Hubballi-580025
E-mail ID: gmadmhr.hescom@gmail.com

Corporate Identity Number[CIN]: U31401KA2002SGC030437

**ಪೀಠಿಕೆ:**

1. ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತದ ವ್ಯಾಪ್ತಿಯಲ್ಲಿ ಒಳಪಡುವ ವಿವಿಧ ಕಛೇರಿಗಳಿಗೆ ಹೊರಗಿನ ಏಜೆನ್ಸಿ ಮುಖಾಂತರ ಹೊರಗುತ್ತಿಗೆ ಆದಾರದ ಮೇಲೆ ಡಾಟಾ ಎಂಟ್ರಿ ಆಪರೇಟರ್/ ಅಟೆಂಡರ್/ಉಗ್ರಾಣ ಸಹಾಯಕರು/ಭದ್ರತಾ ಸಿಬ್ಬಂದಿ/ಮಾನ್ಸೂನ್ ಗ್ಯಾಂಗಮೆನ್/ ಸ್ಟೇಷನ್ ಆಪರೇಟರ್/ ಸ್ಟೇಷನ್ ಹೆಲ್ಪರ್/ ವಾಹನ ಚಾಲಕರು/ ಹೌಸ್ ಕೀಪೀಂಗ್/ ಪದವೀಧರರು/ 24*7 ಕಾಲ್ ಸೆಂಟರ್ ಸಿಬ್ಬಂದಿಗಳು/ ಇಂಜನೀಯರ್/ ಐಟಿ ಕನ್ಸಲ್ಟಂಟ್ ಬಾಡಿಗೆ ವಾಹನಗಳು/ 24*7 ಸರ್ವಿಸ್ ಕೇಂದ್ರದ ಹೆಲ್ಪರಗಳು ಇನ್ನಿತರೆ ಸೇವೆಗಳನ್ನು ಪಡೆಯಲು ಕಂಪನಿ ಕಛೇರಿಯಿಂದ ಕಾಲಕಾಲಕ್ಕೆ ಅನುಮೋದನೆಯನ್ನು ನೀಡಲಾಗುತ್ತಿದೆ.
2. ಸದರಿ ವಿಷಯದ ಕುರಿತಂತೆ ಡಾಟಾ ಎಂಟ್ರಿ ಆಪರೇಟರ್/ ಉಗ್ರಾಣ ಸಹಾಯಕರು/ ಭದ್ರತಾ ಸಿಬ್ಬಂದಿ/ ಮಾನ್ಸೂನ್ ಗ್ಯಾಂಗಮೆನ್ ಅಟೆಂಡರ್/ ವಾಹನ ಚಾಲಕರು/ ಹೌಸ್ ಕೀಪೀಂಗ್/ ಪಧವೀಧರರು ಇನ್ನಿತರೆ ಸೇವೆಗಳನ್ನು ಹೊಸದಾಗಿ ಪಡೆಯಲು ಈಗಾಗಲೆ ಪಡೆಯಲಾದ ಸೇವೆಯನ್ನು ಮುಂದುವರೆಸುವ ಸಲುವಾಗಿ ಹುವಿಸಕಂನಿ ವ್ಯಾಪ್ತಿಯಲ್ಲಿನ ವಿವಿಧ ಕಛೇರಿಗಳಿಂದ ಕಂಪನಿ ಕಛೇರಿಯ ಸಿಬ್ಬಂದಿ ಶಾಖೆಯಲ್ಲಿ ಪ್ರಸ್ತಾವನೆಗಳು ಸ್ವೀಕರಿಸಲ್ಪಡುತ್ತಿವೆ.
3. ಸ್ಟೇಷನ್ ಆಪರೇಟರ್/ ಸ್ಟೇಷನ್ ಹಲ್ಪರ್/ 24*7 ಕಾಲ್ ಸೆಂಟರ್ ಸಿಬ್ಬಂದಿಗಳು/ ಎಕ್ಸಪರ್ಟ ಇಂಜನೀಯರ್/ ಐಟಿ ಕನ್ಸಲ್ಟಂಟ್/ ನಿವೃತ್ತ ಅಧಿಕಾರಿ/ ನೌಕರರ ಗುತ್ತಿಗೆ ಸೇವೆ/ ಬಾಡಿಗೆ ವಾಹನಗಳು/ 24*7 ಸರ್ವಿಸ್ ಕೇಂದ್ರದ ಹೆಲ್ಪರ ಗಳು ಸದರಿ ಹೊರಗುತ್ತಿಗೆ ಸೇವೆಗಳಿಗೆ ಕಂಪನಿ ಕಾರ್ಯಾಲಯದ ಇತರೆ ಶಾಖೆಗಳಲ್ಲಿ ಪ್ರಸ್ತಾವನೆಗಳು ಸ್ವೀಕರಿಸಲ್ಪಡುತ್ತಿವೆ.
4. ಸದರಿ ಹೊರಗುತ್ತಿಗೆ ಸೇವೆಗಳಿಗೆ ಸಂಬಂಧಪಟ್ಟ ಘಟಕಗಳಿಂದ ಪ್ರಸ್ತಾವನೆಗಳು ಕಾಲಕಾಲಕ್ಕೆ ನಿಗಧಿತ ಅವಧಿಯ ಒಳಗಾಗಿ ಸಲ್ಲಿಸದೇ ಇರುವುದರಿಂದ, ಅಲ್ಲದೇ ಸದರಿ ಸೇವೆಗಳನ್ನು ವಿವಿಧ ಕಛೇರಿಗಳಲ್ಲಿ ಕಂಪನಿಯ ಪೂರ್ವಾನುಮತಿ, ಪಡೆಯದೇ ಹೊರಗುತ್ತಿಗೆ ಸೇವೆಯನ್ನು ಪಡೆದು ತದನಂತರ ಘಟನೋತ್ತರ ಅನುಮೋದನೆಗಾಗಿ, ಮೇಲಾಧಿಕಾರಿಗಳ ಶಿಫಾರಸ್ಸನ್ನು ಸಹ ಪಡೆಯದೇ ನೇರವಾಗಿ ಕಂಪನಿ ಕಛೇರಿಗೆ ಸಲ್ಲಿಸಲ್ಪಡುತ್ತಿರುವದರಿಂದ. ವಿವಿಧ ಹೊರಗುತ್ತಿಗೆ ಸೇವೆಗಳನ್ನು ವಿಸ್ತರಿಸುವ/ವಿಸ್ತರಿಸದೇ ಇರುವ ಕುರಿತು ನಿರ್ಣಯಗಳನ್ನು ಕಂಪನಿ ಕಛೇರಿಯಿಂದ ತೆಗೆದುಕೊಳ್ಳುವಲ್ಲಿ ಸಂದಿಗ್ಧತೆ ಉಂಟಾಗುತ್ತಿದೆ.
5. ಮೇಲೆ ತಿಳಿಸಿರುವ ಕಾರಣಗಳಿಂದಾಗಿ ಹುವಿಸಕಂನಿ ವ್ಯಾಪ್ತಿಯ ವಿವಿಧ ಕಛೇರಿಗಳಲ್ಲಿ ಪಡೆಯಲಾಗುತ್ತಿರುವ ಹೊರಗುತ್ತಿಗೆ ಸೇವೆಗಳ ಅವಶ್ಯಕತೆ ಇರುವ ಬಗ್ಗೆ ಖಚಿತಪಡಿಸಿಕೊಳ್ಳಲು ಸಾಧ್ಯವಾಗದೇ ಇರುವುದರಿಂದ, ಅನೇಕ ಕಛೇರಿಗಳಲ್ಲಿ ಅವಶ್ಯಕತೆಗಿಂತ ಹೆಚ್ಚುವರಿಯಾಗಿ ಅನಗತ್ಯ ಹೊರಗುತ್ತಿಗೆ ಸೇವೆಯನ್ನು ಪಡೆದಿರುವ ಸಾಧ್ಯತೆ ಇರುವುದು ಕಂಡುಬಂದಿರುತ್ತದೆ. ಇದರಿಂದ ಕಂಪನಿಗೆ ಅನಗತ್ಯ ಆರ್ಥಿಕ ಹೊರೆ ಉಂಟಾಗುವ ಸಾಧ್ಯತೆ ಸಹ ಇರುತ್ತದೆ.
6. MFF/GVP ಗಳ ಕುರಿತಂತೆ ಪ್ರಸ್ತಾವನೆ/ನಿರ್ದಿಷ್ಟವಾದ ಸಮಸ್ಯೆಗಳು.
7. ಪ್ರಧಾನ ವ್ಯವಸ್ಥಾಪಕರು(ತಾ /ಆ & ಮಾಸ) ರವರಿಂದ ಅರ್ಥಿಕತೆಯ ಅಳತೆಗೋಲು(economy measures) ವಿಷಯವಾಗಿ ಹೊರಡಿಸಲಾಗಿರುವ ಸುತ್ತೋಲೆ ಸಂಖ್ಯೆ:HESCOM/AO(A)/OSM/CR-13/2009-10/CYS-1095 ದಿನಾಂಕ:30.12.2009 ರ ಕುರಿತು ಕೆಲವು ಮಾರ್ಪಾಡುಗಳೊಂದಿಗೆ ಕಂಪನಿಯ ಹಿತದೃಷ್ಟಿಯಿಂದ ಅಳವಡಿಸುವ ಅವಶ್ಯಕತೆ ಇರುವುದರಿಂದ

ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಆದೇಶ ಸಂಖ್ಯೆ:** ಹುವಿಸಕಂನಿ/ಪ್ರವ್ಯ/ಲೆ[ಸಿ]/ಸಲೆ[ಸಿ]/ಹಿಸ-2/ವಿವ-36/2018-19/ಲ್ಸ-1896 ದಿನಾಂಕ: 25 AUG 2018

ಪೀಠಿಕೆಯಲ್ಲಿ ವಿವರಿಸಲಾದ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತದ ವ್ಯಾಪ್ತಿಯಲ್ಲಿ ಒಳಪಡುವ ವಿವಿಧ ಕಛೇರಿಗಳಿಗೆ ಹೊರಗುತ್ತಿಗೆ ಏಜೆನ್ಸಿ ಮುಖಾಂತರ ಹೊರಗುತ್ತಿಗೆ ಆಧಾರದ ಮೇಲೆ ಪಿಠೀಕೆಯಲ್ಲಿ ವಿವರಿಸಿದ ಹೊರಗುತ್ತಿಗೆ ಸೇವೆಗಳನ್ನು ಪಡೆಯಲು ಅನುಮೋದನೆ/ವಿಸ್ತರಣೆ ನೀಡುವ ಹಾಗು ಆರ್ಥಿಕತೆಯ ಅಳತೆಗೋಲು ವಿಷಯ ಕುರಿತಂತೆ ಸಭೆಯಲ್ಲಿ ಚರ್ಚಿಸಿ ನಿರ್ಣಯ ತೆಗೆದುಕೊಂಡು ಶಿಫಾರಸ್ಸು ಮಾಡಲು ಈ ಕೆಳಕಂಡ ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸಲಾಗಿದೆ.

| ಕ್ರ ಸಂ | ಪದನಾಮ | |
|---|---|---|
| 1 | ನಿರ್ದೇಶಕರು[ತಾಂತ್ರಿಕ] | ಅಧ್ಯಕ್ಷರು |
| 2 | ಮುಖ್ಯ ಆರ್ಥಿಕ ಅಧಿಕಾರಿಗಳು | ಸದಸ್ಯರು |
| 3 | ಆರ್ಥಿಕ ಸಲಹೆಗಾರರು, (ಆಂತರಿಕ ಪರಿಶೋದನೆ) | ಸದಸ್ಯರು |
| 4 | ಪ್ರಧಾನ ವ್ಯವಸ್ಥಾಪಕರು(ಆಡಳಿತ & ಮಾ ಸಂ ಅ) | ಸದಸ್ಯರು |
| 5 | ಮುಖ್ಯ ಇಂಜಿನೀಯರ್(ವಿ) ಹುಬ್ಬಳ್ಳಿ ವಲಯ | ಸದಸ್ಯರು |
| 6 | ಮುಖ್ಯ ಇಂಜಿನೀಯರ್(ವಿ) ಬೆಳಗಾವಿ ವಲಯ | ಸದಸ್ಯರು |

ಲೆಕ್ಕಾಧಿಕಾರಿ (ಸಿಬ್ಬಂದಿ), ಕಂಪನಿ ಕಾರ್ಯಾಲಯ, ಹುವಿಸಕಂನಿ, ಹುಬ್ಬಳ್ಳಿ, ಇವರು ಸದರಿ ಸಮಿತಿಯ ಸಂಚಾಲಕರಾಗಿ ಕಾರ್ಯನಿರ್ವಹಿಸಲು ಆದೇಶಿಸಲಾಗಿದೆ.

"ಮಾನ್ಯ ವ್ಯವಸ್ಥಾಪಕ ನಿರ್ದೇಶಕರಿಂದ ಕರಡು ಪ್ರತಿ ಅನುಮೋದಿಸಲ್ಪಟ್ಟಿರುತ್ತದೆ."

25/8
ಪ್ರಧಾನ ವ್ಯವಸ್ಥಾಪಕರು
[ಆಡಳಿತ ಮತ್ತು ಮಾ.ಸಂ.ಅ]

ಪ್ರತಿಗಳು:

1. ಮುಖ್ಯ ಇಂಜಿನೀಯರ್(ವಿ), ವಲಯ ಕಛೇರಿ, ಹುವಿಸಕಂನಿ., ಹುಬ್ಬಳ್ಳಿ/ ಬೆಳಗಾವಿ.
2. ಪ್ರಧಾನ ವ್ಯವಸ್ಥಾಪಕರು[ಆಡಳಿತ. ಮತ್ತು ಮಾ.ಸಂ.ಅ.], ಕಂಪನಿ ಕಛೇರಿ, ಹುವಿಸಕಂನಿ., ಹುಬ್ಬಳ್ಳಿ.
3. ಅಧೀಕ್ಷಕ ಇಂಜಿನೀಯರ್(ವಿ), ಟಿ. & ಪಿ. ಶಾಖೆ, ಕಂಪನಿ ಕಛೇರಿ, ಹುವಿಸಕಂನಿ., ಹುಬ್ಬಳ್ಳಿ.
4. ಎಲ್ಲ ಅಧೀಕ್ಷಕ ಇಂಜಿನೀಯರ್(ವಿ), ಕಾರ್ಯ ಮತ್ತು ಪಾಲನೆ ವೃತ್ತಗಳು, ಹುವಿಸಕಂನಿ.,
5. ಎಲ್ಲ ಕಾರ್ಯನಿರ್ವಾಹಕ ಇಂಜಿನೀಯರ್(ವಿ), 33 ಕೆ.ವ್ಹಿ. ಎಸ್ & ಎಲ್. ವಿಭಾಗಗಳು, ಹುವಿಸಕಂನಿ.,
6. ಎಲ್ಲ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಕಾರ್ಯ ಮತ್ತು ಪಾಲನೆ ವಿಭಾಗಗಳು, ಹುವಿಸಕಂನಿ.,
7. ಲೆಕ್ಕಾಧಿಕಾರಿ[ಆಡಳಿತ], ಕಂಪನಿ ಕಛೇರಿ, ಹುವಿಸಕಂನಿ., ಹುಬ್ಬಳ್ಳಿ.
8. ಲೆಕ್ಕಾಧಿಕಾರಿ[ಸಿಬ್ಬಂದಿ], ಕಂಪನಿ ಕಛೇರಿ, ಹುವಿಸಕಂನಿ., ಹುಬ್ಬಳ್ಳಿ.

[redacted]

[redacted]

11. ಹಿರಿಯ ಆಪ್ತ ಕಾರ್ಯದರ್ಶಿ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು[ತಾಂತ್ರಿಕ], ಕಂಪನಿ ಕಛೇರಿ, ಹುವಿಸಕಂನಿ., ಹುಬ್ಬಳ್ಳಿ ರವರ